ವಿಧಾನಸಭೆಯ ವಿಸರ್ಜನೆಯಿಂದಾಗಿ ಸದರಿ ಸಮಿತಿಯನ್ನು ಪುನರ್ ರಚಿಸಲು ಕ್ರಮ ಕೈಗೊಳ್ಳಲಾಗಿದೆ. ಪುನರ್ ರಚಿತ ಸಮಿತಿಯು ತನ್ನ ವರದಿಯನ್ನು ಕೊಟ್ಟ ಕೂಡಲೇ ಸರ್ಕಾರವು ಮುಂದಿನ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಕೇಂದ್ರ ಸರ್ಕಾರವು ಕೈಗೊಂಡ ಕ್ರಮದನುಸಾರ ವೆಚ್ಚದಲ್ಲಿ ಕಡಿತ

1506. ಡಾ. ಎ.ಬಿ. ಮಾಲಕ ರೆಡ್ಡಿ (ಯಾದಗಿರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರವು ಕೈಗೊಂಡ ಕ್ರಮದನುಸಾರ ವೆಚ್ಚದಲ್ಲಿ ಕಡಿತವನ್ನು ರಾಜ್ಯ ಸರ್ಕಾರವೂ ಜಾರಿಗೊಳಿಸಿರುವುದು ವಾಸ್ತವವೇ?

ಆ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು :

1. ಇಲಾಖೆಗಳ ಹೆಸರು
2. ಆಯವ್ಯಯದಲ್ಲಿ ಸೂಚಿಸಿರುವ ಹಣ
3. ಜಾರಿಗೊಳಿಸಿರುವ ಕಡಿತ
4. ವಿಚಾರಗಿರುವ ವಾಸ್ತವಿಕ ವೆಚ್ಚ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ಮಿತವ್ಯಯ ಆದೇಶಗಳನ್ನು ಜಾರಿಗೊಳಿಸುತ್ತಿದೆ. ಕೇಂದ್ರ ಸರ್ಕಾರದ ಅನುಷ್ಠಾನದಲ್ಲಿರುವ ಕೆಲವು ಮಿತವ್ಯಯ ಕ್ರಮಗಳನ್ನು ರಾಜ್ಯ ಸರ್ಕಾರವು ಈ ಕೆಳಗೆ ಸೂಚಿಸಿರುವಂತೆ ಅನ್ವಯಿಸಿಕೊಂಡಿದೆ.

1. ದೂರವಾಣಿ ವೆಚ್ಚದಲ್ಲಿ ಶೇ. 10 ರಷ್ಟು ಕಡಿತ ವಿಧಿಸಲಾಗಿದೆ.
2. ಸಾರ್ವಜನಿಕ ಕಟ್ಟಡಗಳಲ್ಲಿ ಹಾಗೂ ಕಛೇರಿಗಳ ವಿದ್ಯುಚ್ಛಕ್ತಿ ವಿನಿಯೋಗದಲ್ಲಿ ಶೇ. 10 ರಷ್ಟು ಕಡಿತ ವಿಧಿಸಲಾಗಿದೆ.
3. ಪೆಟ್ರೋಲ್, ಡೀಸೆಲ್, ಎಣ್ಣೆ, ವಾಹನಗಳ ನಿರ್ವಹಣೆಯ ವೆಚ್ಚದಲ್ಲಿ ಶೇ. 20 ರಷ್ಟು ಕಡಿತ ವಿಧಿಸಲಾಗಿದೆ.

ಈ ಮಧ್ಯೆ ಕೇಂದ್ರ ಸರ್ಕಾರವು ಕೈಗೊಂಡಿರುವ ಮಿತವ್ಯಯ ಕ್ರಮಗಳನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರಿ ವೆಚ್ಚದಲ್ಲಿ ಮಿತವ್ಯಯ ಕ್ರಮಗಳನ್ನು ಸೂಚಿಸಲು ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ನೇಮಿಸಲಾಗಿದೆ. ಈ ಉಪ ಸಮಿತಿಯು ವರದಿ ನೀಡಿದೆ. ವಿವರಗಳನ್ನು ಆಯವ್ಯಯ ಭಾಷಣದಲ್ಲೂ ತಿಳಿಸಲಾಗಿದೆ. ಇದನ್ನು ಸರ್ಕಾರದಲ್ಲಿ ಒಪ್ಪಿಕೊಳ್ಳಲಾಗಿದೆ. ಈ ಬಗ್ಗೆ ಕೈಗೊಂಡ ನಿರ್ಣಯಗಳನ್ನು ಜಾರಿಗೊಳಿಸಲು ಸರ್ಕಾರದ ಆದೇಶಗಳನ್ನೂ ಸಹ ಸದ್ಯದಲ್ಲಿಯೇ ಹೊರಡಿಸಲಾಗುತ್ತದೆ.

ಆ) ಮಿತವ್ಯಯ ಆದೇಶಗಳು ಸರ್ಕಾರದ ಎಲ್ಲಾ ಇಲಾಖೆಗಳಿಗೂ ಹಾಗೂ ರಾಜ್ಯದ ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಈ ರೀತಿ ಜಾರಿಗೊಳಿಸಿದ ಆದೇಶಗಳಿಂದ ಸರ್ಕಾರಕ್ಕೆ ಲಭ್ಯವಾದ ವಾಸ್ತವಿಕ ಉಳಿತಾಯವನ್ನು ಕೂಡಲೆ ಪರಿಮಾಣ ಮಾಡಲು ಸಾಧ್ಯವಿಲ್ಲ. ಆದಾಗ್ಯೂ ಸಾಕಷ್ಟು ರೀತಿಯಲ್ಲಿ ವೆಚ್ಚವನ್ನು ಕಡಿತಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ.